4. ಹಂಪಿ - ಹಂಪಿಯ ಕಮಲಾಪುರ ಹಾಗೂ ಟಿ.ಬಿ. ಡ್ಯಾಂ ಬಳಿ ಕೆ.ಎಸ್.ಟಿ.ಡಿ.ಸಿ. ಹೋಟೆಲ್ ಗಳನ್ನು ನಿರ್ವಹಿಸುತ್ತಿದೆ. ಇತ್ತೀಚೆಗೆ ಕಮಲಾಪುರದಲ್ಲಿ ನೂತನವಾಗಿ ಯಾತ್ರಿ ನಿವಾಸ ಮತ್ತು ಪ್ರವಾಸಿ ಮಾಹಿತಿ ಕೇಂದ್ರವನ್ನು ನಿರ್ಮಿಸಲಾಗಿದೆ.

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ವತಿಯಿಂದ ಪಾಲ ಬದಾಮಿ ರಸ್ತೆಯನ್ನು ಮೇಲ್ದರ್ಜೆಗೇರಿಸುವುದು

909 (1187) - ಶ್ರೀ ಪಾಟೀಲ್ ಡಿ.ಆರ್. (ಗದಗ್): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ವತಿಯಿಂದ ಪಾಲಾ ಬಾದಾಮಿ ರಸ್ತೆಯನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರಕಾರದ ಪರಿಶೀಲನೆಯಲ್ಲಿದೆಯೇ;

ಆ. ಇದನ್ನು ಕಾರ್ಯಗತಗೊಳಿಸಲು ಸರಕಾರಕ್ಕೆ ಬೇಕಾಗುವ ಕಾಲಾವಕಾಶವೆಷ್ಟು.

ಇ. ಪ್ರಸಕ್ತ ಹಣಕಾಸು ವರ್ಷದಲ್ಲಿ ಈ ರಸ್ತೆ ಕಾಮಗಾರಿ ಪ್ರಾರಂಭಿಸಲಾಗುವುದೇ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ. ಇಲ್ಲ.

ಆ. ಉದ್ಭವಿಸುವುದಿಲ್ಲ.

ಇ. ಉದ್ಭವಿಸುವುದಿಲ್ಲ.

ಗಣಕೀಕೃತ ಉತಾರೆ ಒದಗಿಸುತ್ತಿರುವಲ್ಲಿ ರೈತರಿಗೆ ಆಗುತ್ತಿರುವ ತೊಂದರೆ

910 (1039) - ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ಗಣಕಯಂತ್ರಗಳ ಸಹಾಯದಿಂದ ತಾಲ್ಲೂಕು ಕಛೇರಿಗಳಲ್ಲಿ ರೈತರಿಗೆ ಗಣಕೀಕೃತ ಉತಾರೆ ಒದಗಿಸಲಾಗುತ್ತಿದೆಯೇ.

ಆ. ತಾಲ್ಲೂಕಿನ ಕಛೇರಿಯಲ್ಲಿ ಮಾತ್ರ ಗಣಕೀಕೃತ ಉತಾರೆ ಒದಗಿಸುತ್ತಿದ್ದು, ದೂರದ ಗ್ರಾಮಗಳಿಂದ ರೈತರು ಬಂದು ಉತಾರೆ ಪಡೆಯುವುದಕ್ಕೆ ತುಂಬಾ ತೊದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಈ ಬಗ್ಗೆ ರೈತರಿಂದಾಗಲೀ, ಇತರೆ ಯಾರಿಂದಾಗಲೀ ದೂರುಗಳು ಬಂದಿವೆಯೇ.

ಇ. ಹಾಗಿದ್ದರೆ, ತೊಂದರೆ ತಪ್ಪಿಸಲು ಸರ್ಕಾರ ಕನಿಷ್ಠ ನಾಡಕಛೇರಿಗೆ ಒಂದರಂತೆ ಗಣಕೀಕೃತ ಉತಾರೆ ನೀಡುವ ವ್ಯವಸ್ಥೆಯನ್ನು ಕೈಗೊಳ್ಳಲು ಮುಂದಾಗುವುದೇ.

ಈ. ಹಾಗಿದ್ದಲ್ಲಿ, ಸರ್ಕಾರವು ಈ ಬಗ್ಗೆ ಏನು ಕ್ರಮ ಕೈಗೊಂಡಿದೆ ಮತ್ತು ಏನು ಕ್ರಮ ಕೈಗೊಳ್ಳುವುದು, ಯಾವಾಗ ಈ ವ್ಯವಸ್ಥೆ ಪ್ರಾರಂಭಿಸಲಾಗುವುದು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ. ಹೌದು.

ಆ. ಇಲ್ಲ.

ಇ. ಸರ್ಕಾರವು ಭೂಮಿ ಯೋಜನೆಯನ್ನು ವಿಕೇಂದ್ರೀಕರಣಗೊಳಿಸಿ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸುಮಾರು 100 ಹೋಬಳಿಗಳಿಗೆ ಈ ಯೋಜನೆಯನ್ನು ಜಾರಿಗೆ ತರಲಿದೆ.

ಈ. ಪ್ರಸಕ್ತ ಆರ್ಥಿಕ ವರ್ಷದ ಅಂತ್ಯದೊಳಗಾಗಿ ಈ ಯೋಜನೆಯನ್ನು 100 ಹೋಬಳಿಗಳಿಗೆ ವಿಕೇಂದ್ರೀಕರಣಗೊಳಿಸಲಾಗುವುದು.

ಬಿಜಾಪುರ ತಾಲ್ಲೂಕಿನ ಲೋಕೋಪಯೋಗಿ ಇಲಾಖೆಯ ರಸ್ತೆಗಳು

911 (1040) - ಶ್ರೀ ಪಾಟೀಲ ಶಿವಾನಂದ ಸಿದ್ದರಾಮಗೌಡ (ತಿಕೋಟ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಬಿಜಾಪುರ ತಾಲ್ಲೂಕಿನಲ್ಲಿ ಒಟ್ಟು ಎಷ್ಟು ಕಿಮೀ ರಸ್ತೆ ಲೋಕೋಪಯೋಗಿ ಇಲಾಖೆಗೆ ಒಳಪಟ್ಟಿರುತ್ತದೆ.

ಆ. ಕಳೆದ 3 ವರ್ಷಗಳಿಂದ ತಾಲ್ಲೂಕಿನ ಲೋಕೋಪಯೋಗಿ ಇಲಾಖೆಯ ರಸ್ತೆಗಳು ದುರಸ್ತಿ ಕಾಣದೆ ಇದ್ದು, ಈ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ.

ಇ. ರಸ್ತೆಗಳು ಹದಗೆಟ್ಟು ಹೋಗಿದ್ದು, ರಸ್ತೆ ತುಂಬೆಲ್ಲಾ ತಗ್ಗುಗಳು ಬಿದ್ದು ರಸ್ತೆಗಳ ಹೆಚ್ಚಿನ ಭಾಗದಲ್ಲಿ ಎರಡೂ ಬದಿಗಳು ಕತ್ತರಿಸಿ ಹೋಗಿರುವುದನ್ನು ಇಲಾಖೆ ಗಮನಿಸುತ್ತಿಲ್ಲವೆ, ಹಾಗಿದ್ದರೆ, ಕೂಡಲೆ ದುರಸ್ತಿಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ.

ಈ. ಹಾಗಿದ್ದರೆ, ಕೈಕೊಳ್ಳಬಹುದಾದ ನಿರ್ದಿಷ್ಟ ಕಾಲಮಿತಿ ತಿಳಿಸುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ. ಬಿಜಾಪುರ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಗೆ ಒಳಪಟ್ಟಿರುವ ರಸ್ತೆಗಳ ವಿವರ ಕೆಳಕಂಡಂತಿದೆ.

1. ರಾಷ್ಟ್ರೀಯ ಹೆದ್ದಾರಿ 63.20 ಕಿಮೀ.
2. ರಾಜ್ಯ ಹೆದ್ದಾರಿ 132.80 ಕಿಮೀ.
3. ಜಿಲ್ಲಾ ಮುಖ್ಯ ರಸ್ತೆ 256.12 ಕಿಮೀ.

ಆ. ಬಿಜಾಪುರ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ರಸ್ತೆಗಳನ್ನು ಈ ಕೆಳಕಂಡ ವಿವಿಧ ಯೋಜನೆಯಡಿಯಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ.

1. ಜೇವರಗಿ-ಚಿಕ್ಕೋಡಿ ರಸ್ತೆ (ರಾ.ಹೆ.) ಕಿಮೀ. 36.20 ಉದ್ದದ ವಿಜಾಪೂರದಿಂದ ತಿಕೋಟ ಮತ್ತು ತಿಕೋಟದಿಂದ ಹೊನವಾಡ ಗ್ರಾಮದವರೆಗಿನ ರಸ್ತೆಯನ್ನು ಅಭಿವೃದ್ಧಿಗಾಗಿ ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಅನುಷ್ಠಾನ ಘಟಕಕ್ಕೆ ಹಸ್ತಾಂತರಿಸಲಾಗಿದ್ದು ಕೆಲಸವನ್ನು ಪ್ರಾರಂಭಿಸಲಾಗಿದೆ.

2. ಬಿಜಾಪುರ ಯತ್ನಾಳ ರಸ್ತೆ (ಜಿಲ್ಲಾ ಮುಖ್ಯ ರಸ್ತೆ) 5.00 ಕಿಮೀ. ಉದ್ದದ ರಸ್ತೆಯನ್ನು ಕೇಂದ್ರ ರಸ್ತೆ ಯೋಜನೆಯಡಿಯಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ.

3. ಬುರ್ನಾಪೂರ-ಮಧಬಾವಿ, ದ್ಯಾವೇರಿ, ಧನವಾಡರಿಹಟ್ಟಿ ಜಿಲ್ಲಾ ಮುಖ್ಯ ರಸ್ತೆ, 14 ಕಿಮೀ. ಉದ್ದ.
4. ಅಥರ್ಗಾ ಇಂಚನಾಳತಾಂಡಾ ತಿಡಗುಂದಿ ಶಿರನಾಳ ಜಿಲ್ಲಾ ಮುಖ್ಯ ರಸ್ತೆ 12 ಕಿಮೀ.

ಈ ಕಾಮಗಾರಿಗಳನ್ನು ನಬಾರ್ಡ್ ಆರ್‌ಐಡಿಎಫ್ ಅಡಿ ಕೈಗೆತ್ತಿಕೊಂಡಿದ್ದು, ಡಿಸೆಂಬರ್ 2002 ರೊಳಗೆ ಮುಗಿಸಲಾಗುವುದು.

5. ಗುಣದಾಳ-ಚೋಳಚಿಕ್ಕಲಕಿ ಜಿಲ್ಲಾ ಮುಖ್ಯ ರಸ್ತೆ 7 ಕಿಮೀ.